# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **633** |
| **ಸದಸ್ಯರ ಹೆಸರು** | : | **ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **12.03.2025** |
| **ಉತ್ತರಿಸಬೇಕಾದ ಸಚಿವರು** | : | **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯ ಗಡಿಭಾಗದಲ್ಲಿ ಹಕ್ಕಿಜ್ವರ ಹೆಚ್ಚಳದ ಹಿನ್ನಲೆಯಲ್ಲಿ, ಆಂದ್ರ ಮತ್ತು ಮಹಾರಾಷ್ಟ್ರದಿಂದ ಬರುವ ಕೋಳಿ ಮತ್ತು ಮೊಟ್ಟೆಗಳ ತಪಾಸಣೆಗೆ ಇಲಾಖೆ ಕೈಗೊಂಡ ಕ್ರಮಗಳೇನು: (ಮಾಹಿತಿ ನೀಡುವುದು) | ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಿಗೆ ಹೊಂದಿಕೊಂಡಿರುವ ಬೀದರ್ ಜಿಲ್ಲೆಯ ಗಡಿಭಾಗದಲ್ಲಿ ಜಂಬಗಿ, ಚಿಂತಾಕಿ, ಬಾದಲಗಾಂವ್, ಎಕಂಬಾ, ಕಮಲನಗರ, ಹುಲಸೂರ, ಚಂಡಕಾಪೂರ, ಅಳವಾಯಿ, ಲಖನಗಾಂವ್, ಭಂಗೂರು, ಶಹಾಪೂರ, ಧರ್ಮಾಪೂರ ಮತ್ತು ಚಿಲ್ಲರ್ಗಿ ಸ್ಥಳಗಳಲ್ಲಿ ಒಟ್ಟಾರೆ 13 ಚೆಕ್‌ಪೋಸ್ಟ್‌ಗಳನ್ನು ತೆರೆಯಲಾಗಿರುತ್ತದೆ.<br><br>ಸದರಿ ಚೆಕ್‌ಪೋಸ್ಟ್‌ಗಳಲ್ಲಿ ಪಶುಪಾಲನಾ ಇಲಾಖೆಯ ಸಿಬ್ಬಂದಿಯನ್ನು ನಿಯೋಜಿಸಿ ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಂದ ಆಗಮಿಸುವ ಕೋಳಿ, ಕೋಳಿ ಮೊಟ್ಟೆ, ಕೋಳಿ ಮಾಂಸ ಮತ್ತು ಕೋಳಿ ಆಹಾರ ಇವುಗಳ ಸಾಗಾಣಿಕಾ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ಶಂಕಿತ ಅಥವಾ ರೋಗಗ್ರಸ್ತ ಕೋಳಿಗಳು ಅಥವಾ ಕೋಳಿ ಉತ್ಪನ್ನಗಳು ರಾಜ್ಯದ ಒಳಗಡೆ ಬರದಂತೆ ಕೇಂದ್ರ ಸರ್ಕಾರದ AHF&D ಇಲಾಖೆಯ ಮಾರ್ಗಸೂಚಿ 2021ರಂತೆ ಕಟ್ಟೆಚ್ಚರ ವಹಿಸಲಾಗಿದೆ.<br><br>ಕೋಳಿ ಶೀತಜ್ವರದ ನಿಯಂತ್ರಣಕ್ಕಾಗಿ ಜಿಲ್ಲೆಯಲ್ಲಿ 08 Rapid Response Team (RRT) ತಂಡಗಳು ಸನ್ನದ್ಧವಾಗಿವೆ. |
| ಆ) | ಬೀದರ್ ಮತ್ತು ಕಲಬುರಗಿ ಗಡಿಭಾಗವಾಗಿರುವುದರಿಂದ ಜನರ ಸುರಕ್ಷಿತ ದೃಷ್ಟಿಯಿಂದ ಕೋಳಿ ಮತ್ತು ಮೊಟ್ಟೆಗಳ ಸಾಗಾಣಿಕೆ ನಿರ್ಬಂಧ ಮಾಡಬಹುದಲ್ಲವೇ; ನಿರ್ಬಂಧ ಮಾಡಿದ್ದರೆ ಯಾವ ಯಾವ ರೀತಿ ನಿರ್ಬಂಧ ಮತ್ತು ತಪಾಸಣೆ ಮಾಡಲಾಗುವುದು? (ವಿವರ ಒದಗಿಸುವುದು). | ಬೀದರ್ ಜಿಲ್ಲೆಯಲ್ಲಿ 13 ಚೆಕ್‌ಪೋಸ್ಟ್‌ಗಳನ್ನು ರಚಿಸಿ ಇಲಾಖೆಯ ಸಿಬ್ಬಂದಿಯನ್ನು 24/7 ನಿಯೋಜಿಸಲಾಗಿದೆ. ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳಿಂದ ಆಗಮಿಸುವ ಕೋಳಿ, ಕೋಳಿ ಮೊಟ್ಟೆ, ಕೋಳಿ ಮಾಂಸ ಮತ್ತು ಕೋಳಿ ಆಹಾರ ಇವುಗಳ ಸಾಗಾಣಿಕಾ ವಾಹನಗಳನ್ನು ತಪಾಸಣೆಗೆ ಒಳಪಡಿಸಿ ಶಂಕಿತ ಅಥವಾ ರೋಗಪೀಡಿತ ಕೋಳಿ ಅಥವಾ ಕೋಳಿ ಉತ್ಪನ್ನಗಳು ರಾಜ್ಯದ ಒಳಗೆ ಬರದಂತೆ ಕಟ್ಟೆಚ್ಚರ ವಹಿಸಲಾಗಿದೆ. |

| | | |
|---|---|---|
| | | ಕಲಬುರಗಿ ಜಿಲ್ಲೆಯ ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳ ಗಡಿಭಾಗಗಳಲ್ಲಿ ಒಟ್ಟು 09 ಚೆಕ್‌ಪೋಸ್ಟ್‌ಗಲ್ಲಿ ಇಲಾಖೆಯ ಸಿಬ್ಬಂದಿಗಳನ್ನು 24/7 ನಿಯೋಜಿಸಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮತ್ತು ಕೋಳಿ ಶೀತಜ್ವರ ನಿರ್ವಹಣೆಗಾಗಿ ಪ್ರತಿ ತಾಲ್ಲೂಕಿನಲ್ಲಿ 01 ರಂತೆ ಒಟ್ಟು 11 Rapid Response Team ತಂಡಗಳನ್ನು ರಚಿಸಲಾಗಿದೆ. |

**ಸಂಖ್ಯೆ:ಪಸಂಮೀ 53 ಸಲೆವಿ 2025**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು